ಪೊಲೀಸ್ ಇಲಾಖೆಗೆ engineers, professors, doctors join ಆಗುತ್ತಿದ್ದಾರೆ. ಮೊನ್ನೆ ನಾನು ಮೈಸೂರು ಪೆರೇಡ್‌ನಲ್ಲಿ ಹೋಗಿದ್ದಾಗ 15 ಜನರಲ್ಲಿ 14 ಜನ Post Graduates. ಅದರಲ್ಲಿ ನಾಲ್ಕು ಜನ Doctors ಇದ್ದರು. ಒಳ್ಳೊಳ್ಳೆಯ ಟೆಕ್ನಾಲಜಿ ಇರುವಂಥ ವ್ಯವಸ್ಥೆಯನ್ನು ನಮ್ಮ ಇಲಾಖೆಗೆ ತರಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆ ದೃಷ್ಟಿಯಿಂದ modernization ಮಾಡುವ ಹಂತಕ್ಕೆ ಈಗ ಕೇಂದ್ರ ಸರ್ಕಾರಕ್ಕೆ ಸಹ ತಿಳಿಸಿದ್ದೇವೆ. ಮೊನ್ನೆ ನಾನು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಬೆಂಗಳೂರಿನ development ದೃಷ್ಟಿಯಿಂದ ಹಾಗೂ ಎಲ್ಲಾ ದೃಷ್ಟಿಯಿಂದ ನಾನು ವಿಶೇಷವಾದ ಸವಲತ್ತುಗಳನ್ನು ಕೊಡುವತ್ತ ಹೆಚ್ಚು ಒತ್ತನ್ನು ಕೊಡುತ್ತೇನೆ ಎಂದು ಅವರು ಹೇಳಿದ್ದಾರೆ. ಹಾಗಾಗಿ ಬೆಂಗಳೂರು ನಗರ ಇವತ್ತು ವಿಶ್ವ ಮಟ್ಟದ ನಗರವಾಗಿ ಬೆಳಯುತ್ತಿದೆ. ಹಾಗಾಗಿ ಈ ನಗರವನ್ನು ಸ್ವಚ್ಛತೆ ಇರಬಹುದು ಅಥವಾ ಕಾನೂನು ಮತ್ತು ಸುವ್ಯವಸ್ಥೆ ಎರಡೂ ದೃಷ್ಟಿಯಿಂದಲೂ ಕಾಪಾಡುವಂತದ್ದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಹೇಳಿರುವಂತೆ ಸಿಸಿ ಟಿವಿಗಳನ್ನು ಅಳವಡಿಸುಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : – ಮಾನ್ಯ ಅಧ್ಯಕ್ಷರೆ ದಿನಾಂಕ 26–7–2012ರ 4ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 99 ಪ್ರಶ್ನೆಗಳ ಪೈಕಿ 91 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : – 91 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

(ಅನುಬಂಧ–1)

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

1) ವಿಷಯ : – ತಪ್ಪು ಕಲ್ಪನೆಯಿಂದ ಆಗಿರುವ ಮಾಹಿತಿಗಳು ಕಡತದಿಂದ ತೆಗೆಯುವ ಬಗ್ಗೆ.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ) : – ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ಅಧಿಕಾರಿಗಳೊಂದಿಗೆ ಸಭೆ

ನಡೆಸಿದ ನಂತರ ಸದನದಲ್ಲಿ ಭಾಗವಹಿಸಿ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದೇನೆ. ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿರುವ ವಿಚಾರದಲ್ಲೂ ಕೂಡ ಈ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಒಂದು ಶೂನ್ಯ ವೇಳೆಯ ನನಗೆ ವಿಷಯ ಸಂಬಂಧಪಟ್ಟದ್ದು ಇರಲಿಲ್ಲ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಿತ್ತು ಆದ್ದರಿಂದ ಆ ವಿಷಯವನ್ನು ಅವರಿಗೆ transfer ಮಾಡಿ ಹೋಗಿದ್ದೆ. ಆದಾದ ನಂತರ ವಿಧಾನ ಪರಿಷತ್‌ನಿಂದ ಕರೆ ಬಂದ ಕಾರಣ ವಿಧಾನ ಪರಿಷತ್‌ನ ಕಾರ್ಯಕಲಾಪದಲ್ಲಿ ನಾನು ಭಾಗವಹಿಸಿ, 3.30 ನಿಮಿಷಕ್ಕೆ ನನ್ನ ಕಛೇರಯಲ್ಲಿ ಊಟ ಮುಗಿಸಿ ನಂತರ ಕಛೇರಿಗೆ ಬರುವ ಜನರನ್ನು ನೋಡುತ್ತಿದ್ದೆ. ಆ ಬಳಿಕ ನನ್ನ ಕ್ಷೇತ್ರದಲ್ಲಿ ಹಿಂದೂ ಪ್ರಕರಣ ಶಂಕಿತ ಪ್ರಕರಣವಾಗಿದ್ದರಿಂದ ಐದು ದಿನಗಳಿಂದ ನಮ್ಮ ನಾಯಕರೊಬ್ಬರಿಗೆ ಹುಷಾರಿಲ್ಲದ ಕಾರಣ ತಕ್ಷಣವೇ ಅಲ್ಲಿಗೆ ಹೋಗಬೇಕಾದ್ದರಿಂದ ಅಲ್ಲಿಗೆ ಹೋಗಿ ಸಂಜೆ 7.30 ಗಂಟೆಗೆ ವಾಪಸ್ಸಾಗಿ ಇದೇ ಸದನದಲ್ಲಿ Calling Attention ನಲ್ಲಿ ಉತ್ತರವನ್ನು ಕೊಟ್ಟಿದ್ದೇವೆ. ಇದರ ಮಧ್ಯದಲ್ಲಿ ಹಿಂದಿನ ಅದರ ಹಿಂದಿನ ದಿನದಿಂದಲೂ ಕೂಡ ಸದನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೇನೆ. ತಪ್ಪು ಕಲ್ಪನೆಯಿಂದ ಕೆಲವು ಮಾಹಿತಿಗಳು ತಮ್ಮ ಗಮನಕ್ಕೆ ಬಂದಿರುವುದರಿಂದ ನನ್ನ ಬಗ್ಗೆ ಕೆಲವು remarks ಆಯಿತು. ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕು ಮತ್ತು ಮಾಧ್ಯಮದಲ್ಲಾಗುತ್ತಿರುವ ಪ್ರಚಾರವನ್ನು ನಿಲ್ಲಿಸಿ, ಸರಿಯಾದ ಮಾಹಿತಿಯನ್ನೇನು ತಮ್ಮ ಮುಖಾಂತರ ನೀಡುತ್ತಿದ್ದೀರಿ ಅದಕ್ಕೂ ಅಷ್ಟೇ ಪ್ರಚಾರವನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಮಾಧ್ಯಮದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಕಡತದಿಂದ ಆ ವಿಷಯವನ್ನು ತೆಗೆಯಿರಿ.

ಅಧ್ಯಕ್ಷರು : – ಕಡತದಿಂದ ತೆಗೆಯಿರಿ.

2. ವಿಷಯ : ಲಿಖಿತ ಉತ್ತರಗಳನ್ನು ಸೂಕ್ತ ವೇಳೆಯಲ್ಲಿ ಒದಗಿಸುವ ಬಗ್ಗೆ.

ಶ್ರೀ ಕೃಷ್ಣ ಬೈರೇಗೌಡ (ಬ್ಯಾಟರಾಯನಪುರ) : – ಮಾನ್ಯ ಅಧ್ಯಕ್ಷರೆ ತಮ್ಮಲ್ಲೊಂದು ಮನವಿ, ಲಿಖಿತ ಉತ್ತರಗಳಿಗೆ ಕೊಡುವ ಪ್ರಶ್ನೆಗಳಿಗೆ ಸರ್ಕಾರ ತಮ್ಮ ಮುಂದೆ ಒಪ್ಪಿಕೊಂಡರು ಸಹ ಉತ್ತರಗಳನ್ನು ಕೊಡುತ್ತಿಲ್ಲ. ತಮ್ಮಲ್ಲಿ ನಾನು ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ.

ಶ್ರೀ ವೆಂಕಟರಾವ್ ನಾಡಗೌಡ : – ಬಹಳಷ್ಟು ಉತ್ತರಗಳು ಬಂದಿಲ್ಲ.